ಎಸ್. ಸಿ:ಎಸ್.ಟಿ ಕಾರ್ಪೋರೇಷನ್ನಿನ ಅಧಿಕಾರಿಯಾಗಿರಲೀ, ಜನರಲ್ ಮೇನೇಜರ್ ಆಗಿರಲೀ ಅಥವಾ ಐಎಎಸ್ ಆಫೀಸರ್ ಆಗಿರಲಿ ಅಥವಾ ಐಪಿಎಸ್ ಆಫೀಸರ್ ಆಗಿರಲಿ, the man who has utilised the scheduled castes' money ಎಸ್.ಸಿ:ಎಸ್.ಟಿಯವರ ಹಣವನ್ನು ಯಾರು ತಿಂದಿದ್ದಾರೆ, ಅವರಿಗೆ ಶಿಕ್ಷೆಯಾಗಲೇಬೇಕು. ಜೊತೆಗೆ, ಸಿಆರ್.ಇ ಸೆಲ್ ಎನ್ನುವುದೊಂದನ್ನು ತಾವು ಇಟ್ಟುಕೊಂಡಿದ್ದೀರಿ. ಆ ಸಿಆರ್ಇ ಸೆಲ್‌ಗೂ ನೀವು ನೋಟೀಸ್ ಕಳುಹಿಸಿ, ಅವರಿಂದಲೂ ರಿಪೋರ್ಟ್ ತೆಗೆಸುಕೊಳ್ಳೀ ಅವರ ರಿಪೋರ್ಟ್, if they are not satisfied with the report, then give it to C.O.D.

ಡಾ. ವೈ. ನಾಗಪ್ಪ: 2003ನೇ ಇಸವಿಯಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ನೀವು ಸಿ.ಓ.ಡಿ. ತನಿಖೆಗೆ ಒಪ್ಪಿಸಿ ಎಂದು ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ಆಯಿತು, ಎಲ್ಲ ಸದಸ್ಯರೂ ಒಕ್ಕೊರಲಿನಿಂದ ಹೇಳಿದ್ದೀರಿ, ನಾನು ಸಿ.ಓ.ಡಿ.ಯಿಂದ ಎನ್‌ಕ್ವೈರಿ ಮಾಡಿಸುತ್ತೇನೆ.

(ಮಾನ್ಯ ಸಚಿವರ ಉತ್ತರಿಂದ ಸಮಾಧಾನಗೊಂಡ ಧರಣಿ ನಿರತ ಭಾರತೀಯ ಜನತಾ ಪಕ್ಷದ ಶಾಸಕರು, ಧರಣಿಯನ್ನು ಕೈ ಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

ಶ್ರೀ ಎಂ.ಪಿ. ಪ್ರಕಾಶ್ : ಸಿ.ಓ.ಡಿ. ಎನ್‌ಕ್ವೈರಿಯ ಸಂದರ್ಭದಲ್ಲಿ ಎಲ್ಲಾ ದಸ್ತಾವೇಜುಗಳನ್ನು ತೆಗೆದುಕೊಂಡು ಹೋದಾಗ, ಆ ತನಿಖೆಯ ನೆಪದ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಮಾಡುವಂಥ ಅನುಕೂಲಗಳಿಗೆ ತೊಂದರೆಯಾಗಿಬಿಡಬಹುದು ಎನ್ನುವ ಕಾರಣದಿಂದ, ಸದುದ್ದೇಶದಿಂದ ಅವರು ಯೋಚನೆ ಮಾಡಿದರು. ಮಾನ್ಯ ಸದಸ್ಯರುಗಳೆಲ್ಲಾ ಹೇಳಿದ ಮೇಲೆ, ಅವರ ಭಾವನೆಗೆ ಸಚಿವರು ಸ್ಪಂದಿಸಿದ್ದಾರೆ. ಆದ್ದರಿಂದ ಈ ಸಿ.ಓ.ಡಿ. ಎನ್‌ಕ್ವೈರಿಗೆ ಒಪ್ಪಿದ್ದಾರೆ.

ಅಧ್ಯಕ್ಷರು : ರಾಜೇಂದ್ರನ್‌ರವರೇ, ನೀವು ಶೂನ್ಯವೇಳೆಯಲ್ಲಿ ಪಾರದರ್ಶಕತೆ ಬಗ್ಗೆ ಪ್ರಸ್ತಾಪ ಮಾಡಲು ಪ್ರಸ್ತಾವನೆ ಕೊಟ್ಟಿದ್ದೀರಿ.

ವಿಷಯ: ಉಡುಪಿ ಜಿಲ್ಲೆಯ ಮಲ್ಪಯಲ್ಲಿ, ತಮಿಳುನಾಡು ಮೂಲದ ವ್ಯಾಪಾರಸ್ಥರು 10 ಕೋಟಿ ರೂಪಾಯಿಗಳ ಸೀಗಡಿ ಮೀನನ್ನು ಖರೀದಿಸಿ ಮೀನುಗಾರರಿಗೆ ಮೋಸ ಮಾಡಿರುವ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಉಡುಪಿ

ಜಿಲ್ಲೆಯಲ್ಲಿ ಮಲ್ಪೆಯಲ್ಲಿ ರಫೀಕ್ ಮತ್ತು ರಾಜನ್ ಎನ್ನುವ ತಮಿಳುನಾಡು ಮೂಲದವರು ಬಂದು ಮೀನುಗಾರರಿಗೆ, ವ್ಯಾಪಾರಸ್ಥ ಮಹಿಳಾ ಮೀನುಗಾರರಿಗೆ ಮೋಸ ಮಾಡಿರುವ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಅವರು ಸೀಗಡಿಯನ್ನು ಖರೀದಿ ಮಾಡಿ ಮೀನುಗಾರರಿಗೆ 10 ಕೋಟಿ ರೂಪಾಯಿಗಳನ್ನು ಮೋಸ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ, ಉಡುಪಿ ಜಿಲ್ಲೆಯ ಎಲ್ಲಾ ಶಾಸಕರು ಒಂದು ಮನವಿಯನ್ನು ಕೊಟ್ಟಾಗ, ಇದನ್ನು ಸಿ.ಓ.ಡಿ. ತನಿಖೆಗೆ ಹಾಕುತ್ತೇವೆ ಎಂದು ಹೇಳಿದರು. ಅಲ್ಲಿ ಹೀಗೀಗೆ ಆಗಿದೆ, ಇನ್ನೂ ಕ್ರಮ ತೆಗೆಸುಕೊಂಡಿಲ್ಲ ಎನ್ನುವ ವರದಿಯನ್ನು ಕೊಟ್ಟಿದ್ದೆನೋ, ಅದನ್ನೇ ಈಗ ಪುನಃ ನನಗೆ ಉತ್ತರದ ರೂಪದಲ್ಲಿ ವಾಪಸ್ಸು ಕೊಟ್ಟಿದ್ದಾರೆ. ದಿನಾಂಕ 16–08–04ರಲ್ಲಿ ನಾವು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದು, ಈವರೆಗೆ ಏನಾಗಿದೆ ಎನ್ನುವುದು ನನಗೆ ಬೇಕು. ಅವರು ಮದ್ರಾಸ್ ಪೊಲೀಸಿನವರನ್ನು ಕರೆದುಕೊಂಡು ಬಂದು, ಕಂಪ್ಲೆಂಟ್ ಕೊಟ್ಟವರನ್ನೇ ಇಲ್ಲಿಂದ ಕೆಲವರನ್ನು ಅಲ್ಲಿ ತನಿಖೆಗಾಗಿ ಕರೆದುಕೊಂಡು ಹೋಗಿದ್ದಾರೆ. ನಮ್ಮ ಸಿ.ಓ.ಡಿ. ಪೊಲೀಸಿನವರು ಏನು ಮಾಡುತ್ತಿದ್ದರು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ನಾನು ಕೊಟ್ಟ ಮಾಹಿತಿಯನ್ನೇ ಪುನಃ ನನಗೆ ಉತ್ತರದ ರೂಪದಲ್ಲಿ ಕಳುಹಿಸಿದ್ದಾರೆ. ಮದ್ರಾಸ್ ಮೂಲದ ವ್ಯಾಪಾರಸ್ಥರು 10 ಕೋಟಿ ರೂಪಾಯಿಗಳ ಸೀಗಡಿ ಮೀನನ್ನು ಖರೀದಿ ಮಾಡಿ ಮೋಸ ಮಾಡಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಇದು ವ್ಯಾಪಕವಾದಂಥ ವಿಚಾರವಾಗಿದೆ. ತಾವು ಇದನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿದಾಗ ನಾನೂ ಅಲ್ಲಿ ಇದ್ದೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಂದು ಉತ್ತರವನ್ನು ತಯಾರು ಮಾಡಿಸಿದ್ದಾರೆ. ಆವತ್ತಿನ ದಿವಸ ತಾವು ಕೊಟ್ಟ ನಂತರವೇ, ಇದರ ಬಗ್ಗೆ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದಾರೆ. ಇದಕ್ಕೆ ಉತ್ತರ ಈ ರೀತಿ ಇದೆ: ಉಡುಪಿ ಜಿಲ್ಲೆಯ ಎಸ್.ಎಂ. ರಫೀಕ್ ಮತ್ತು ಇತರರು ಹಾಗೂ ಚನ್ನೈ ಮೂಲದ ರಾಜನ್ ಮತ್ತು ಇತರರು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸೀಗಡಿ ಮೀನುಗಾರರಿಂದ ಖರೀದಿಸಿದ ಸೀಗಡಿ ಮೀನಿನ ಹಣವನ್ನು ಪಾವತಿಸದೇ ವಂಚಿಸಿರುವ ಬಗ್ಗೆ ಸರ್ಕಾರಕ್ಕೆ ದೂರು ಬಂದ ನಂತರ, ಈ ಬಗ್ಗೆ ಒಳಾಡಳಿತ ಇಲಾಖೆಯ ಮೂಖಾಂತರ ಉಡುಪಿ ಜಿಲ್ಲಾ ಸೂಪರಿಂಟೆಂಡ್ ಆಫ್ ಪೊಲೀಸ್ ರವರಿಗೆ ದೂರು ರವಾನೆಯಾಗಿದ್ದು, ಉಡುಪಿಯ ಮಲ್ಪೆ ಠಾಣೆಯಲ್ಲಿ ವಂಚನೆ ಪ್ರಕರಣ ಸಂಖ್ಯೆ 81:04 ಅನ್ನು

ಐಪಿಸಿ ಸೆಕ್ಷನ್ 409, 420, 120 ಬಿ ಗಳಡಿಯಲ್ಲಿ ದೂರು ದಾಖಲಾಗಿರುತ್ತದೆ. ಇದಲ್ಲದೇ, ಇದೇ ವ್ಯಕ್ತಿಗಳ ಮೇಲೆ ಗಂಗೊಳ್ಳಿ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 96:04 ಮತ್ತು ಕುಂದಾಪುರ ಠಾಣೆಯಲ್ಲಿ ಮತ್ತೊಂದು ಮೊಕದ್ದಮೆ ಸಂಖ್ಯೆ 253:04 ಕೂಡ ದಾಖಲಾಗಿರುತ್ತದೆ. ಈ ಪ್ರಕರಣಗಳು ಈಗ ಸಿಓಡಿ ತನಿಖೆಗಾಗಿ ವರ್ಗಾವಣೆಗೊಂಡಿದ್ದು ತನಿಖೆಯು ಮುಂದುವರೆದಿರುತ್ತದೆ. ತನಿಖಾ ವರದಿ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಲ್ಲಿ ಇನ್ನೊಂದು ಏನಾಗಿದೆ ಎಂದರೆ, ಆಪಾದಿತರಿಗೆ ಏನಾದರೂ ತೊಂದರೆ ಕೊಟ್ಟರೆ, ಯಾರು ಕಂಪ್ಲೆನ್ಯಾನ್ಸ್ ಇದ್ದಾರೆ ಅವರ ಮೇಲೇ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಉಡುಪಿ ಪೊಲೀಸಿನವರು ನೋಟೀಸನ್ನು ಕೊಟ್ಟಿದ್ದಾರೆ. ಯಾರು ಹಣವನ್ನು ಕಳೆದುಕೊಂಡಿದ್ದಾರೆ, ಪುನಃ ಅವರಿಗೇ ನೋಟೀಸ್ ಕೊಟ್ಟಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅತಿ ಶೀಘ್ರದಲ್ಲಿ ಇದರ ತನಿಖೆಯನ್ನು ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಶಾಸಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ ತಕ್ಷಣವೇ ಮುಖ್ಯಮಂತ್ರಿಗಳು ಆದೇಶವನ್ನು ಕಳುಹಿಸಿ ಕೊಟ್ಟಿದ್ದಾರೆ.ಮೂರು ಠಾಣೆಗಳಲ್ಲಿ ಅವರ ಮೇಲೆ ವಂಚನೆಯ ಪ್ರಕರಣಗಳ ದೂರುಗಳು ದಾಖಲಾಗಿವೆ. ಇದು ಸಿಓಡಿಗೂ ವರ್ಗವಾಗಿದೆ. ಇದು ಅಂತರರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಆಗಿರುವುದರಿಂದ, ಇದರಲ್ಲಿ ತಮಿಳುನಾಡಿನ ಜನರೂ ಕೂಡ ಇರುವ ಕಾರಣಕ್ಕಾಗಿ ಇದು ಸಿಓಡಿಗೂ ಕೂಡ ವರ್ಗಾವಣೆಯಾಗಿದೆ.

ತಮಿಳುನಾಡು ಜನರು ಕೂಡ ಇದರಲ್ಲಿ ಇರತಕ್ಕ ಕಾರಣಕ್ಕಾಗಿ COD ಗೂ ಕೂಡ ವರ್ಗಾವಣೆಯಾಗಿದೆ. ಅದರ ವರದಿ ಬಂದ ತಕ್ಷಣ ಕ್ರಮ ಕೈಗೊಳ್ಳುತ್ತೇವೆ. ತಾವು ಹೇಳಿದಂತೆ ಇವತ್ತೇ ಪೊಲೀಸ್ ಅಧಿಕಾರಿಗಳ ಜೊತೆ ಸಂಪರ್ಕ ಮಾಡಿ ಆ ತರಹದ ಏನಾದರೊಂದು ಪ್ರಕರಣವಾಗಿ ಅವರಿಗೆ notice ಕೊಡತಕ್ಕಂಥದ್ದು ಇದ್ದರೆ ಅದನ್ನು ಕೂಡ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ.

ವಿಷಯ: ಶಿಕ್ಷಕರಿಗೆ ತತ್‌ಕ್ಷಣ ವೇತನ ಬಿಡುಗಡೆ ಮಾಡುವ ಕುರಿತು.

ಶ್ರೀ ಎಂ.ಪಿ ರೇಣುಕಾಚಾರ್ಯ (ಹೊನ್ನಾಳಿ): ಮಾನ್ಯ ಅಧ್ಯಕ್ಷರೆ, ನಮ್ಮ ದಾವಣಗೆರೆ ಜಿಲ್ಲೆ ಖಾಸಗಿ ಪ್ರೌಢಶಾಲೆ ಸರ್ಕಾರಿ ಪ್ರೌಢಶಾಲೆ O.B.B. ಪರಿವರ್ತಿತ ಪ್ರಾಥಮಿಕ ಶಾಲೆಗಳಿಗೆ ಫೆಬ್ರವರಿ ತಿಂಗಳಿಂದ ಸಂಬಳವಾಗಿಲ್ಲ.